# ಅಪೂರ್ವ ಅವಕಾಶ! ಕೆಲವೇ ದಿವಸಗಳು ಉಳಿದಿವೆ! ಬೇಗನೆ ನೋಂದಾಯಿಸಿಕೊಳ್ಳಿ !!

## ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವ – (2011–2014)

### 'ವಿವೇಕಪ್ರಭ' ಪತ್ರಿಕೆಯ ವತಿಯಿಂದ

# ವಿವೇಕ ಚೇತನ – 2013

(ವಿಶೇಷ ಆಧ್ಯಾತ್ಮಿಕ ಶಿಬಿರ)

**27.9.2013 ರಿಂದ 29.09.2013 ; ಸ್ಥಳ : ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು**

ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳು ಆಧುನಿಕ ಯುಗದ ಆಧ್ಯಾತ್ಮಿಕ ಜ್ಯೋತಿಗಳಾಗಿವೆ; ಈಗಿನ ಕಾಲದ ಯಾಂತ್ರಿಕ ಜೀವನಕ್ಕೆ ಜೀವಸಂಜೀವಿನಿಗಳಾಗಿವೆ. ಕಷ್ಟಕಾರ್ಪಣ್ಯಗಳಿಂದ ನೊಂದ ಮನಸ್ಸಿಗೆ ಸಾಂತ್ವನವನ್ನೂ, ಧೈರ್ಯವನ್ನೂ, ಆತ್ಮವಿಶ್ವಾಸವನ್ನೂ ನೀಡುವ ಈ ಉದಾತ್ತ ಚಿಂತನೆಗಳನ್ನು ಎಲ್ಲರೂ ಒಟ್ಟಿಗೆ ಸೇರಿ ಮನನ ಮಾಡುವ ಆವಶ್ಯಕತೆ ಇದೆ. ಆ ಸುಸಂದರ್ಭ ಈಗ ಒದಗಿಬಂದಿದ್ದು, ಈ ಉದ್ದೇಶಕ್ಕಾಗಿಯೇ ವಿವೇಕಪ್ರಭ ಪತ್ರಿಕೆಯ ವತಿಯಿಂದ, ಸ್ವಾಮಿ ವಿವೇಕಾನಂದರ 150ನೇ ಜನ್ಮಜಯಂತಿ ಮಹೋತ್ಸವದ ಅಂಗವಾಗಿ **'ವಿವೇಕ ಚೇತನ– 2013'** ಅನ್ನು ಆಯೋಜಿಸಲಾಗಿದೆ.



ಮೂರು ದಿನಗಳ ಈ ಸಮಾವೇಶದಲ್ಲಿ **ದಿವ್ಯತ್ರಯರ, ಅದರಲ್ಲೂ ಸ್ವಾಮಿ ವಿವೇಕಾನಂದರ ಜೀವನ–ಸಂದೇಶಗಳ ಆಲೋಚನೆ, ಶಾಸ್ತ್ರಗಳ ಬಗ್ಗೆ ತಿಳಿವಳಿಕೆ, ಧ್ಯಾನದ ಆಚರಣೆಯ ಬಗ್ಗೆ ಅರಿವು, ದೈನಂದಿನ ಜೀವನದಲ್ಲಿ ಅಧ್ಯಾತ್ಮವನ್ನು ಅಳವಡಿಸಿಕೊಳ್ಳುವುದು ಹೇಗೆ?** – ಈ ವಿಷಯಗಳ ಬಗ್ಗೆ ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳು ಮಾರ್ಗದರ್ಶನ ಮಾಡುವರು. ಹಾಗೆಯೇ ನಾಡಿನ ಸುಪ್ರಸಿದ್ಧ ಭಾಷಣಕಾರರಿಂದ ಉದ್ಬೋಧಕ ಪ್ರವಚನಗಳು, ಅಧ್ಯಾತ್ಮ ಪ್ರವಚನ–ಗಾನಸುಧೆ – ಇವೂ ಆಯೋಜಿತವಾಗಿವೆ. ಪ್ರಸಿದ್ಧ ಗಾಯಕರಿಂದ ದೈನಂದಿನ ಭಜನೆಯೂ ಇರುತ್ತದೆ. ಈ ಸಮಾವೇಶದಲ್ಲಿ ರಾಮಕೃಷ್ಣ ಮಹಾಸಂಘವು ಕರ್ನಾಟಕದಲ್ಲಿ ಹೊರತರುತ್ತಿರುವ ಏಕೈಕ ಪತ್ರಿಕೆಯಾದ 'ವಿವೇಕಪ್ರಭ'ದ ಪ್ರಚಾರದ ಬಗ್ಗೆಯೂ ಸಮಾಲೋಚನೆ ನಡೆಯುವುದು.

ಆಶ್ರಮಕ್ಕೆ ಹತ್ತಿರವಿರುವ ಎರಡು ಛತ್ರಗಳಲ್ಲಿ, ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಸುಸಜ್ಜಿತ ವಸತಿ ವ್ಯವಸ್ಥೆಯನ್ನು ಮಾಡಲಾಗಿದೆ.

1. **ಕಾಣಿಕೆ : ವಸತಿ ಸಹಿತ: ರೂ.700/– ಮಾತ್ರ; ವಸತಿ ರಹಿತ: ರೂ.500/– ಮಾತ್ರ; ವಿದ್ಯಾರ್ಥಿಗಳಿಗೆ: ರೂ.350/– ಮಾತ್ರ. (ವಿದ್ಯಾರ್ಥಿಗಳು ಶಾಲಾ ಕಾಲೇಜುಗಳ ಪರಿಚಯ ಪತ್ರದ ನಕಲು ಪ್ರತಿಯನ್ನು ಲಗತ್ತಿಸಿರಬೇಕು.)**
2. **ಶಿಬಿರಾರ್ಥಿಗಳು 27.09.2013 (ಶುಕ್ರವಾರ) ಮಧ್ಯಾಹ್ನ ಒಂದು ಗಂಟೆಯ ಒಳಗೆ ಆಶ್ರಮಕ್ಕೆ ಬರಬೇಕು ಮತ್ತು 29.09.2013 ರಂದು (ಭಾನುವಾರ) ಮಧ್ಯಾಹ್ನ 3.30ರ ನಂತರ ತೆರಳಬಹುದು. ವಸತಿ ರಹಿತ ಅಭ್ಯರ್ಥಿಗಳು ಪ್ರತಿನಿತ್ಯ ಕಾರ್ಯಕ್ರಮಕ್ಕೆ ಬಂದು ತದನಂತರ ಮನೆಗೆ ತೆರಳಬಹುದು.**
3. **ಆಸಕ್ತರು, ಭಾಗವಹಿಸುವ ಪ್ರತಿ ವ್ಯಕ್ತಿಗೆ ರೂ.700/– ಅನ್ನು ಡಿ.ಡಿ. ಕಳುಹಿಸಿ (ವಿದ್ಯಾರ್ಥಿಗಳಿಗೆ ರೂ.350/–) ನೋಂದಾಯಿಸಿಕೊಳ್ಳಬಹುದು.**
4. **ಒಟ್ಟು ಕೇವಲ 400 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿರುವುದರಿಂದ ಒಡನೆ ಹಣ ಕಳುಹಿಸಿ, ನೋಂದಾಯಿಸಿಕೊಳ್ಳಿ.**
5. **ಹಣವನ್ನು ಕೇವಲ ಡಿ.ಡಿ. ಮೂಲಕ 'Sri Ramakrishna Ashrama, Viveka prabha A/c' ಹೆಸರಿಗೆ ಕಳಿಸಬೇಕು. ಲಕೋಟೆಯ ಮೇಲೆ *'ವಿವೇಕಪ್ರಭ ವಿವೇಕ ಚೇತನ' – 2013'* ಎಂದು ನಮೂದಿಸಿರಬೇಕು. ಪತ್ರದಲ್ಲಿ ಹೆಸರು, ವಿಳಾಸ, ಮೊಬೈಲ್ ನಂಬರ್, ಇ–ಮೈಲ್ ವಿಳಾಸ, ವಯಸ್ಸುಗಳನ್ನು ನಮೂದಿಸಬೇಕು. ಒಂದೇ ಪತ್ರದಲ್ಲಿ ಎಷ್ಟು ಜನರನ್ನು ಬೇಕಾದರೂ ನಮೂದಿಸಬಹುದು ಹಾಗೂ ಒಟ್ಟು ಹಣವನ್ನು ಒಂದೇ ಡಿ.ಡಿ.ಯ ಮೂಲಕ ಕಳಿಸಬಹುದು.**
6. **ಹೊಟೆಲ್ ಕೊಠಡಿ ವ್ಯವಸ್ಥೆ ಇಚ್ಛಿಸುವವರು ಬರೆದು ತಿಳಿಸಿದರೆ, ಅವರಿಗೆ ಮಾಹಿತಿ ಪತ್ರ ಕಳಿಸಲಾಗುವುದು.**
7. **ದೀರ್ಘಕಾಲದ ಕಾಯಿಲೆಗಳಿಂದ ನರಳುತ್ತಿರುವವರು ಭಾಗವಹಿಸದಿರುವುದು ಒಳ್ಳೆಯದು.**
8. **ಡಿ.ಡಿ. ಮತ್ತು ಪತ್ರವನ್ನು ಕಳಿಸಬೇಕಾದ ವಿಳಾಸ :**
   *'ವಿವೇಕಪ್ರಭ ವಿವೇಕ ಚೇತನ' – 2013'*
   *ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ,*
   *ಮೈಸೂರು – 570 020; ಫೋನ್: 9481533505*



# ಭಗವದ್ಗೀತೆಯ ಸಾರಭೂತ ಅರ್ಥ

ಸಂಪಾದಕೀಯ

## ಅನನ್ಯ ಭಕ್ತಿ

ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯ. ಶ್ರೀಕೃಷ್ಣನು ಅರ್ಜುನನಿಗೆ ವಿಶ್ವರೂಪವನ್ನು ತೋರಿಸಿದ್ದಾನೆ. ಅರ್ಜುನ ಅವನನ್ನು ಸ್ತುತಿಸುತ್ತಾನೆ. ಮತ್ತೆ ಚತುರ್ಭುಜ ರೂಪವನ್ನು ತೋರೆಂದು ಕೇಳಿಕೊಳ್ಳುತ್ತಾನೆ. ಭಗವಂತನು ಹಾಗೆಯೇ ಮಾಡುತ್ತಾನೆ. ಕಡೆಯದಾಗಿ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ: "ನಿನಗೆ ನಾನು ತೋರಿಸಿದ ವಿಶ್ವರೂಪವು ಬೇರೆಯವರಿಗೆ ನೋಡಲು ಅಸಾಧ್ಯವೇ ಸರಿ. ಈ ರೂಪವನ್ನು ದೇವತೆಗಳೂ ಕೂಡ ಕಾಣಬೇಕೆಂದು ತವಕಿಸುತ್ತಾರೆ. ಈ ರೀತಿಯ ವಿಶ್ವರೂಪವನ್ನು ವೇದಾಧ್ಯಯನದಿಂದಾಗಲಿ, ತಪಸ್ಸಿನಿಂದಾಗಲಿ, ದಾನದಿಂದಾಗಲಿ, ಪೂಜೆಯಿಂದಾಗಲಿ ನೋಡಲು ಆಗುವುದಿಲ್ಲ." ಹಾಗಾದರೆ ಅರ್ಜುನನಿಗೆ ದೊರಕಿದ ಭಾಗ್ಯವನ್ನು ಪಡೆದುಕೊಳ್ಳುವುದು ಹೇಗೆ? ಅದಕ್ಕೆ ಕೃಷ್ಣನು ಮುಂದುವರೆದು ಹೇಳುತ್ತಾನೆ:

**ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ ।**
**ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥**

(೧೧ : ೫೪)

"ಶತ್ರುಗಳನ್ನು ಸುಡುವ ಹೇ ಅರ್ಜುನ, ಅನನ್ಯವಾದ ಭಕ್ತಿಯಿಂದ, ಈ ವಿಧವಾದ ನಾನು, ತತ್ತ್ವದಿಂದ ತಿಳಿದುಕೊಳ್ಳುವುದಕ್ಕೂ, ಕಾಣುವುದಕ್ಕೂ ಮತ್ತು ಸೇರುವುದಕ್ಕೂ ಶಕ್ಯನು."

ಅನನ್ಯ ಭಕ್ತಿ ಎಂದರೇನು? ಶ್ರೀಶಂಕರಾಚಾರ್ಯರು ಹೀಗೆ ವಿವರಿಸುತ್ತಾರೆ: **ಅನನ್ಯಯಾ ಅಪೃಥಗ್ಭೂತಯಾ ಭಗವತಃ ಅನ್ಯತ್ರ ಪೃಥಕ್ ನ ಕದಾಚಿದಪಿ ಯಾ ಭವತಿ ಸಾ ಅನನ್ಯಾ ಭಕ್ತಿಃ, ಸರ್ವೈರಪಿ ಕರಣೈಃ ವಾಸುದೇವಾತ್ ಅನ್ಯತ್ ನೋಪಲಭ್ಯತೇ ಯಯಾ ಸಾ ಅನನ್ಯಾ ಭಕ್ತಿಃ** – "ಅನನ್ಯವಾದ ಎಂದರೆ ಬೇರೆ ಯಾವುದೂ ಅಲ್ಲದ – ಅಂದರೆ ಭಗವಂತನಿಗಿಂತ ಬೇರೆಯಾದ ಯಾವುದರಲ್ಲಿಯೂ, ಯಾವುದು (ಯಾವ ಮನಸ್ಸಿನ ಭಾವವು) ಎಂದಿಗೂ ಇರುವುದಿಲ್ಲವೋ, ಅದೇ ಅನನ್ಯಭಕ್ತಿ. ಎಲ್ಲ ಕರಣಗಳಿಂದಲೂ (ಇಂದ್ರಿಯಗಳಿಂದಲೂ) ವಾಸುದೇವನಿಗಿಂತ ಬೇರೆ ಇನ್ನೊಂದು ಯಾವುದಕ್ಕೆ (ಯಾವ ಮನಃಸ್ಥಿತಿಗೆ) ಕಾಣಿಸುವುದಿಲ್ಲವೋ, ಅದು ಅನನ್ಯಭಕ್ತಿ."

ಇಂಥ ಭಕ್ತಿಯಿಂದಲೇ ಶಾಸ್ತ್ರಮುಖೇನ ಭಗವಂತನನ್ನು ಯಥಾವತ್ತಾಗಿ ತಿಳಿದುಕೊಳ್ಳಲು ಸಾಧ್ಯ (**ತತ್ತ್ವೇನ ಜ್ಞಾತುಂ**). ಬರಿ ತಿಳಿದುಕೊಳ್ಳುವುದಲ್ಲ, ಆತನನ್ನು ಕಂಡುಕೊಳ್ಳಬೇಕು, ಸಾಕ್ಷಾತ್ಕಾರ ಮಾಡಿಕೊಳ್ಳಬೇಕು (**ದ್ರಷ್ಟುಂ**). ಅದೂ ಕೂಡ ಭಕ್ತಿಯಿಂದ ಮಾತ್ರವೇ ಸಾಧ್ಯ. ಆ ಸಾಕ್ಷಾತ್ಕಾರದ ಮುಂದಿನ ಹಂತವೇ ಭಗವಂತನಲ್ಲಿ ಸೇರಿಕೊಳ್ಳುವುದು (**ಪ್ರವೇಷ್ಟುಂ**). ಇದನ್ನೇ ಮೋಕ್ಷವೆಂದು ಕರೆಯುತ್ತಾರೆ. ಅದು ಸಾಧ್ಯವಾಗುವುದು ಕೂಡ ಭಕ್ತಿಯಿಂದಲೇ.

## ಸಾರಭೂತ ಅರ್ಥ

ಮುಂದಿನ ಶ್ಲೋಕವನ್ನು 'ಭಗವದ್ಗೀತೆಯ ಸಾರಭೂತ ಅರ್ಥ' ಎಂದು ಶ್ರೀಶಂಕರಾಚಾರ್ಯರು ಬಣ್ಣಿಸುತ್ತಾರೆ (**ಗೀತಾಶಾಸ್ತ್ರಸ್ಯ ಸಾರಭೂತಃ ಅರ್ಥಃ**). ಹಾಗೆಯೇ, ಈ ಶ್ಲೋಕದಲ್ಲಿ ನಿಃಶ್ರೇಯಸ್ಸನ್ನು ತಂದುಕೊಡುವ ಅಂಶಗಳೆಲ್ಲವನ್ನೂ ಒಟ್ಟಾಗಿ ಸೇರಿಸಿ ಹೇಳಿದೆ. ಇದರ ಉದ್ದೇಶ, ಜನರು ಅದನ್ನು ಅನುಷ್ಠಾನ ಮಾಡಬೇಕೆಂಬುದೇ ಆಗಿದೆ ಎನ್ನುತ್ತಾರೆ. ಗೀತೆಯ ಒಟ್ಟು ತಾತ್ಪರ್ಯವು ಈ ಒಂದೇ ಶ್ಲೋಕದಲ್ಲಿ ಅಡಕವಾಗಿದೆಯೆಂದು ಶ್ರೀಶಂಕರರು ಹೇಳುವುದು ನಿಜಕ್ಕೂ ಒಂದು ವಿಶಿಷ್ಟವಾದ ಸಂಗತಿ. ಹೀಗಾಗಿ ಇದರ ಅರ್ಥವನ್ನು ತಿಳಿದುಕೊಂಡು, ಅದರಂತೆ ನಡೆದುಕೊಳ್ಳುವುದು ಎಲ್ಲರಿಗೂ ಶ್ರೇಯಸ್ಕರ. ಆ ಶ್ಲೋಕ ಹೀಗಿದೆ:

**ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।**
**ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥**

(೧೧ : ೫೫)

ಇದನ್ನು ಪದಶಃ ಬಿಡಿಸಿ ಅರ್ಥ ಮಾಡಿಕೊಳ್ಳುವುದು ಸೂಕ್ತ.

**ಮತ್ಕರ್ಮಕೃತ್:** ಮತ್ಕರ್ಮ ಎಂದರೆ 'ನನಗೋಸ್ಕರವಾಗಿ ಮಾಡುವ ಕರ್ಮ' ಎಂದು. ಕೃತ್ ಎಂದರೆ 'ಮಾಡುವವನು.' ನಮ್ಮ ಎಲ್ಲ ಕರ್ಮವನ್ನೂ ಭಗವಂತನ ಪ್ರೀತ್ಯರ್ಥವಾಗಿಯೇ ಮಾಡಬೇಕು ಎಂದು ಇದರ ಅರ್ಥ. ಶ್ರೀರಾಮಾನುಜರು ಈ ಪದಕ್ಕೆ ತಮ್ಮ ಭಾಷ್ಯವನ್ನು ಬರೆಯುತ್ತಾ ಹೀಗೆ ಹೇಳುತ್ತಾರೆ: **ವೇದಾಧ್ಯಯನಾದೀನಿ ಸರ್ವಾಣಿ ಕರ್ಮಾಣಿ ಮದಾರಾಧನ ರೂಪಾಣಿ ಇತಿ ಯಃ ಕರೋತಿ ಸಃ ಮತ್ಕರ್ಮಕೃತ್** – "ವೇದಾಧ್ಯಯನವೇ ಮೊದಲಾದ ಎಲ್ಲ ರೀತಿಯ ಕರ್ಮಗಳನ್ನೂ ನನ್ನ ಆರಾಧನೆಯ ರೂಪದಲ್ಲಿಯೇ ಯಾರು ಮಾಡುತ್ತಾನೆಯೋ ಅವನೇ 'ಮತ್ಕರ್ಮಕೃತ್'." "ನನ್ನ ಕೆಲಸದಲ್ಲೆಲ್ಲ ಪರಮಾತ್ಮನ ಇಚ್ಛೆಯೇ ಅಡಗಿದೆ ಎಂದು ನಿರ್ಧರಿಸಿಕೊಂಡು ಭಗವಂತನ ಸೇವಾಪೂರ್ವಕವಾಗಿ ಕರ್ಮ ಮಾಡುವವನು 'ಮತ್ಕರ್ಮಕೃತ್' " ಎಂದು ಶ್ರೀವಲ್ಲಭಾಚಾರ್ಯರು ಈ ಪದಕ್ಕೆ ವಿವರಣೆಯನ್ನು ನೀಡಿದ್ದಾರೆ.

ಈ ಎಲ್ಲ ಆಚಾರ್ಯರು ಹೇಳುವ ಹಾಗೆ ನಮ್ಮ ಕರ್ಮದ ಉದ್ದೇಶ ಭಗವಂತನ ಸೇವೆ ಅಥವಾ ಆರಾಧನೆಯೇ ಆಗಿರಬೇಕು. ಹಾಗೆಯೇ ಪ್ರತಿಯೊಂದು ಕರ್ಮವನ್ನೂ ನಾವು ಭಗವಂತನ ಆರಾಧನೆಯೆಂದೇ ಭಾವಿಸಬೇಕು. ಒಟ್ಟಾರೆ, ಕರ್ಮದ ಭಾವ ಮತ್ತು ಉದ್ದೇಶ – ಇವೆರಡೂ ಭಗವಂತನ ಆರಾಧನೆಯೇ ಆಗಬೇಕು.

**ಮತ್ಪರಮಃ** – ಶ್ರೀಶಂಕರರು ಇಲ್ಲಿ ಒಂದು ವಿಶಿಷ್ಟವಾದ ಒಳನೋಟವನ್ನು ನೀಡುತ್ತಾರೆ. ಒಬ್ಬ ಸೇವಕನು ತನ್ನ ಯಜಮಾನ ನಿಗಾಗಿಯೇ ಎಲ್ಲ ಕರ್ಮಗಳನ್ನೂ ಮಾಡುತ್ತಾನೆ. ಆದರೆ, "ಮರಣಹೊಂದಿದ ಮೇಲೆ, ನಾನು ನನ್ನ ಯಜಮಾನನನ್ನೇ ಸೇರುತ್ತೇನೆ" ಎಂಬ ಭಾವವೇನೂ ಅವನಲ್ಲಿ ಇರುವುದಿಲ್ಲ. ಆದರೆ ಭಗವಂತನಿಗಾಗಿ ಕರ್ಮ ಮಾಡುವವನು, ಭಗವಂತನನ್ನೇ ಪರಮಗತಿಯಾಗಿ ಹೊಂದಿರಬೇಕು. ಅದನ್ನೇ ಈ ಪದವು ಸೂಚಿಸುತ್ತದೆ. **ಅಹಂ ಪರಮಃ ಪರಾಗತಿಃ ಯಸ್ಯ ಸೋಽಯಂ ಮತ್ಪರಮಃ** – "ನಾನೇ ಯಾರಿಗೆ ಪರಮನು ಅಂದರೆ ಪರಮ ಗತಿಯಾಗಿದ್ದೇನೆಯೋ ಅಂಥವನು **ಮತ್ಪರಮಃ**" ಎಂದು ಶ್ರೀಶಂಕರರು ವ್ಯಾಖ್ಯಾನ ಮಾಡುತ್ತಾರೆ. ಕರ್ಮದ ಮೂಲಕ ನಾವು ಪಡೆದುಕೊಳ್ಳಲು ಇಚ್ಛಿಸುವುದೇನು? ಅದು ಭಗವಂತನೇ ಆಗಿರಬೇಕು. ಅಂತಹ ಭಾವನೆಯನ್ನು ಉಳ್ಳವನೇ **ಮತ್ಪರಮಃ** ಎಂದು ರಾಮಾನುಜರು ಹೇಳುತ್ತಾರೆ. ಪ್ರತಿಯೊಂದು ಕರ್ಮವೂ ಯಾವುದಾದರೊಂದು ಫಲವನ್ನು ತಂದುಕೊಡುತ್ತದೆ. ಅದಕ್ಕಾಗಿ ಆಶಿಸದೆ, **'ಭಗವಂತನೇ ನನ್ನ ಗತಿ'** ಎಂಬ ಭಾವದಿಂದ ಭಗ ವಂತನ ಸಾನ್ನಿಧ್ಯಕ್ಕಾಗಿ ಕಾತರನಾಗಿರುವವನೇ ನಿಜವಾದ ಭಕ್ತ. ಹೀಗೆ ನೈಜ ಭಕ್ತನೊಬ್ಬನ ಪ್ರಾಮಾಣಿಕ ಬಯಕೆಯನ್ನು ಈ ಪದವು ಸಂಕೇತಿಸುತ್ತದೆ.

**ಮದ್ಭಕ್ತಃ** – **ಮಾಮೇವ ಸರ್ವಪ್ರಕಾರೈಃ ಸರ್ವಾತ್ಮನಾ ಸರ್ವೋತ್ಸಾಹೇನ ಭಜತೇ ಇತಿ ಮದ್ಭಕ್ತಃ** – "ನನ್ನನ್ನೇ ಎಲ್ಲ ಪ್ರಕಾರಗಳಿಂದಲೂ ಅಂದರೆ ಸಂಪೂರ್ಣ ಮನಸ್ಸಿನಿಂದ, ಪೂರ್ಣ ಉತ್ಸಾಹದಿಂದ ಭಜಿಸುವವನು ಮದ್ಭಕ್ತಃ (ನನ್ನ ಭಕ್ತ)." ಇದು ಶಂಕರರ ವ್ಯಾಖ್ಯಾನ. ಶ್ರೀರಾಮಾನುಜರು ಇದಕ್ಕೆ ಹೀಗೆ ವ್ಯಾಖ್ಯಾನ ಮಾಡುತ್ತಾರೆ: ಭಗವಂತನನ್ನು ಭಕ್ತನು ಬಹಳವಾಗಿ ಪ್ರೀತಿಸುತ್ತಾನೆ. ಭಗವಂತನ ಕೀರ್ತನೆ, ಸ್ತುತಿ, ಧ್ಯಾನ, ಅರ್ಚನೆ, ನಮಸ್ಕಾರ – ಇವುಗಳನ್ನು ಬಿಟ್ಟು ಜೀವನಧಾರಣೆಯೇ ಇಲ್ಲ ವೆಂದು ಅವನು ಬಗೆದಿರುತ್ತಾನೆ. ಹಾಗೆಯೇ ಅವೆಲ್ಲವನ್ನೂ 'ಪರಮಾತ್ಮನ ಸಾಕ್ಷಾತ್ಕಾರ' ಎಂಬ ಒಂದೇ ಪ್ರಯೋಜನಕ್ಕಾಗಿ **(ಮದೇಕಪ್ರಯೋಜನತಯಾ)** ನಿರಂತರವಾಗಿ ಮಾಡುತ್ತಲೇ ಇರುತ್ತಾನೆ. ಅಂಥವನನ್ನೇ **ಮದ್ಭಕ್ತಃ** ಎಂಬ ಪದವು ಸೂಚಿಸುತ್ತದೆ. ಒಟ್ಟಿನಲ್ಲಿ, ಹಿಂದೆ ಹೇಳಿದ **ಮತ್ಕರ್ಮಕೃತ್, ಮತ್ಪರಮಃ** – ಎರಡೂ ಆಗಿದ್ದು, ಭಗವಂತನನ್ನು ತುಂಬು ಪ್ರೇಮದಿಂದ, ಹಲವಾರು ರೀತಿಗಳಲ್ಲಿ ಭಜಿಸುವವನೇ ನಿಜವಾದ ಭಕ್ತ.

**ಸಂಗವರ್ಜಿತಃ** – ಭಕ್ತನಾದವನು ಪರಮಾತ್ಮನನ್ನೇ ತನ್ನ ಎಲ್ಲ ಆಸಕ್ತಿಗಳ ಕೇಂದ್ರಬಿಂದುವನ್ನಾಗಿ ಮಾಡಿಕೊಳ್ಳಬೇಕು. ಅದಕ್ಕಾಗಿ ಅವನು ಲೌಕಿಕ ಜೀವನದ ಮತ್ತೆಲ್ಲ ಪ್ರಿಯವಾದ ಸಂಗತಿಗಳಲ್ಲಿ ವೈರಾಗ್ಯವನ್ನು ಬೆಳೆಸಿಕೊಳ್ಳಬೇಕು. ಶ್ರೀಶಂಕರರು ಹೇಳುವ ಹಾಗೆ, 'ಸಂಗ' ಎಂದರೆ 'ಪ್ರೀತಿ' ಅಥವಾ 'ಸ್ನೇಹ.' ಅದಿಲ್ಲದವನೇ **ಸಂಗವರ್ಜಿತಃ**. ಯಾರಲ್ಲಿ ಸಂಗವನ್ನು ತ್ಯಜಿಸಬೇಕು? ನಮಗೆ ಇಷ್ಟವಾದ ಹಣ, ಪುತ್ರರು, ಮಿತ್ರರು, ಹೆಂಡತಿ, ಬಂಧುವರ್ಗದವರು – ಇವರಲ್ಲಿ ಸಂಗವನ್ನು ತ್ಯಜಿಸಬೇಕು. **ಮದೇಕಪ್ರಿಯತ್ವೇನ ಇತರಸಂಗಮ್ ಅಸಹಮಾನಃ** ಎಂದು ಶ್ರೀರಾಮಾನುಜರು ಇದಕ್ಕೆ ವ್ಯಾಖ್ಯಾನ ಮಾಡುತ್ತಾರೆ. ಅಂದರೆ, ಭಗವಂತನೊಬ್ಬನೇ ಭಕ್ತನು ಪ್ರೀತಿಸುವ ಏಕಮಾತ್ರ ವಸ್ತು; ಹೀಗಾಗಿ ಇತರ ವಸ್ತುಗಳ ಸಂಗವನ್ನು ಅವನು ಸಹಿಸುವುದಿಲ್ಲ. ಭಗವಂತನಲ್ಲಿ ಇಟ್ಟಿರುವ ನೈಜಭಕ್ತಿಯು ಇನ್ನಿತರ ಸಂಗತಿಗಳ ನಿರಾಕರಣರೂಪದಲ್ಲಿ ಪ್ರಕಟವಾಗುವುದನ್ನು ಈ ಪದವು ಸೂಚಿಸುತ್ತದೆ. ಇದನ್ನೇ ಶ್ರೀರಾಮಕೃಷ್ಣರು, **'ಈಶ್ವರೇ ರಾಗ್, ವಿಷಯೇ ವಿರಾಗ್'** ಎಂದು ಹೇಳಿದ್ದಾರೆ. ಯಾವಾಗ ಪರಮಾತ್ಮನಲ್ಲಿ ನಮಗೆ ಪ್ರೀತಿಯು ಬರುವುದೋ, ಆಗ ವಿಷಯ ವಸ್ತುಗಳಲ್ಲಿ ವೈರಾಗ್ಯವು ಸಹಜವಾಗಿಯೇ ಉಂಟಾಗುತ್ತದೆ. ಈ ಸಂಬಂಧವಾಗಿ ಶ್ರೀರಾಮಕೃಷ್ಣರು ಎರಡು ನಿದರ್ಶನಗಳನ್ನು ನೀಡು ತ್ತಾರೆ: 'ನಾವು ಪೂರ್ವದಿಕ್ಕಿನ ಕಡೆಗೆ ಹೋದಂತೆಲ್ಲ, ಪಶ್ಚಿಮ ದಿಕ್ಕು ತಾನಾಗಿಯೇ ದೂರವಾಗುತ್ತದೆ.' ಅದೇರೀತಿ, 'ಪೂರ್ವದಲ್ಲಿ ಸೂರ್ಯನು ಉದಯಿಸಿದಾಗ, ಕತ್ತಲೆ ತಾನೇತಾನಾಗಿ ಸರಿದು ಹೋಗುತ್ತದೆ.'

**ನಿರ್ವೈರಃ ಸರ್ವಭೂತೇಷು** – ಭಕ್ತನಾದವನು ಎಲ್ಲ ಜೀವಿಗಳಲ್ಲಿಯೂ ಭಗವಂತನನ್ನು ಕಾಣಲು ಶಕ್ತನಾಗಬೇಕು. ಅದಕ್ಕೆ ಪೂರ್ವಭಾವಿಯಾಗಿ ಎಲ್ಲ ಜೀವರಾಶಿಗಳಲ್ಲಿಯೂ ಅವನು ವೈರ ವನ್ನು ತ್ಯಜಿಸಬೇಕು. **ನಿರ್ವೈರಃ ನಿರ್ಗತವೈರಃ ಶತ್ರುಭಾವರಹಿತಃ ಆತ್ಮನಃ ಅತ್ಯಂತ ಅಪಕಾರ ಪ್ರವೃತ್ತೇಷು ಅಪಿ** – "ನಿರ್ವೈರಃ ಎಂದರೆ ವೈರವನ್ನು ತ್ಯಜಿಸಿರುವವನು, ತನಗೆ ಅತ್ಯಂತ ಅಪಕಾರವನ್ನು ಮಾಡಲು ತೊಡಗಿದವರಲ್ಲಿಯೂ ಕೂಡ ಶತ್ರುಭಾವವಿಲ್ಲದವನು" ಎಂದು ಶಂಕರರು ಈ ಪದವನ್ನು ವಿವರಿಸುತ್ತಾರೆ. ರಾಮಾನುಜರು ಇದನ್ನು ವ್ಯಾಖ್ಯಾನಿಸುವ ಬಗೆ ಹೀಗಿದೆ: ನಿರ್ವೈರನಾದವನಲ್ಲಿ ಈ ಲಕ್ಷಣಗಳು ಕಾಣುತ್ತವೆ – ೧. ಅವನಿಗೆ ಸುಖವಾಗುವುದು ಭಗವಂತನೊಡನೆ ಸಂಯೋಗವಾಗುವುದರಿಂದಲೇ. ೨. ಭಗವಂತನ ವಿಯೋಗವಾಗುವುದರಿಂದ ಮಾತ್ರ ಅವನಿಗೆ ದುಃಖವಾಗುತ್ತದೆ (ಹೀಗಾಗಿ ದ್ವೇಷಕ್ಕೆ ಆಸ್ಪದವೇ ಇಲ್ಲ.). ೩. ತನಗೆ ದುಃಖವಾಗುವುದು ತಾನು ಮಾಡಿದ ಪಾಪಗಳಿಂದಲೇ ಎಂದು ಅವನು ತಿಳಿದುಕೊಂಡಿರುತ್ತಾನೆ. ೪. ಪರಮಾತ್ಮನಿಗೆ ಅಧೀನವಾಗಿಯೇ ಎಲ್ಲ ಜೀವಿಗಳೂ ಇರುತ್ತವೆ ಎಂಬ ದೃಢವಾದ ನಂಬಿಕೆಯನ್ನು ಅವನು ಹೊಂದಿರುತ್ತಾನೆ. ಈ ಎಲ್ಲ ಕಾರಣ ಗಳಿಂದ ಅವನಿಗೆ ಯಾರಲ್ಲೂ ಶತ್ರುಭಾವನೆ ಬರುವುದೇ ಇಲ್ಲ.

**ಯಃ ಸ ಮಾಮೇತಿ ಪಾಂಡವ** – "ಅರ್ಜುನ, ಇಂಥವರು ನನ್ನನ್ನು ಸೇರುತ್ತಾರೆ" ಎಂದು ಕಡೆಯಲ್ಲಿ ಕೃಷ್ಣನು ಹೇಳುತ್ತಾನೆ. "ನನ್ನನ್ನು ಬಿಟ್ಟು ಬೇರೆ ಯಾರೂ ಗತಿಯಲ್ಲ, ನಾನೇ ಅವನ ಶ್ರೇಷ್ಠವಾದ ಗತಿಯಾಗಿದ್ದೇನೆ. ಇದೇ ನನ್ನ ಉಪದೇಶ" ಎಂದು ಕೃಷ್ಣನ ಅಭಿಪ್ರಾಯ ಎಂದು ಶಂಕರರು ಹೇಳು ತ್ತಾರೆ. ರಾಮಾನುಜರು ತಮ್ಮ ಭಾಷ್ಯದಲ್ಲಿ, **ನಿರಸ್ತ ಅವಿದ್ಯಾದಿ ಅಶೇಷದೋಷಗಂಧಃ ಮದೇಕಾನುಭವಃ ಭವತಿ** – ಮೇಲೆ ಹೇಳಿದ ಗುಣಗಳುಳ್ಳವನು ಅವಿದ್ಯೆಯೇ ಮೊದಲಾದ ಸಮಸ್ತ ದೋಷಗಳ ಕೊಳೆಯನ್ನೂ ಕಳೆದುಕೊಂಡು, **ಮದೇಕಾನುಭವಃ** –